**ಎಂ ವಿ ಸಿ 1189/2023 ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿ: 29.07.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಡಿ ಜಿ ಎನ್ ವಕೀಲರಿಂದಃ**

ಟ್ರಾಕ್ಟರ್ ಮಾಲೀಕರಾದ 1 ನೇ ಎದುರುದಾರರು ನಮ್ಮ ಊರಿನವರೇ ಆಗಿದ್ದಾರೆ ಎಂದರೆ ಸರಿ. ಅಪಘಾತವು ದಿನಾಂಕ 18.05.2023 ರಂದು ಸಂಭವಿಸಿದ್ದು ದೂರನ್ನು ಎಸ್ ಜಿ ಶೇಖರ್ ರವರ ಹೆಂಡತಿ ಮುಖಾಂತರ ದಿನಾಂಕ 08.06.2023 ರಂದು ನೀಡಲಾಗಿದೆ ಎಂದರೆ ಸರಿ. ನಾನು ನಾಗರಾಜೇಗೌಡ ಮೆಮೋರಿಯಲ್ ಆಸ್ಪತ್ರೆಯಲ್ಲಿ ದಿನಾಂಕ 18.05.2023 ರಂದು ಒಳರೋಗಿಯಾಗಿ ದಾಖಲಾಗಿ ದಿನಾಂಕ 22.05.2023 ರಂದು ಬಿಡುಗಡೆ ಹೊಂದಿದ್ದೇನೆ ಎಂದರೆ ಸರಿ. ನನಗೆ ಯಾವುದೇ ಶಸ್ತ್ರ ಚಿಕಿತ್ಸೆ ಆಗಿಲ್ಲ ಎಂದರೆ ಸರಿಯಲ್ಲ, ಶಸ್ತ್ರ ಚಿಕಿತ್ಸೆ ಆಗಿದೆ. ಅಪಘಾತದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡುವಂತೆ ನಾನು ಆಸ್ಪತ್ರೆಯವರಿಗೆ ಹೇಳಲಿಲ್ಲ. ಸಾಕ್ಷಿಯು ಮುಂದುವರಿದು ಅಪಘಾತ ಹೇಗೆ ಆಯಿತು ಎಂದು ತಾನು ಆಸ್ಪತ್ರೆಯವರಿಗೆ ತಿಳಿಸಿದೆ ಎಂದು ಹೇಳುತ್ತಾರೆ.

ಅಪಘಾತ ಆದ ನಂತರ ನೇರವಾಗಿ ಪ್ರಜ್ವಲ್ ಆಸ್ಪತ್ರೆಗೆ ಹೋದೆ. ಸಾಕ್ಷಿ ಮುಂದುವರಿದು ಅದನ್ನು ನಾಗರಾಜೇಗೌಡ ಮೆಮೋರಿಯಲ್ ಆಸ್ಪತ್ರೆ ಎಂದೂ ಸಹ ಕರೆಯುತ್ತಾರೆ ಎಂದು ಹೇಳುತ್ತಾರೆ.

1 ನೇ ಎದುರುದಾರರ ಟ್ರಾಕ್ಟರ್ ನನಗೆ ಡಿಕ್ಕಿಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಎದುರುದಾರರು ಷರೀಕ್ಕಾಗಿ 20 ದಿನಗಳ ನಂತರ ಸುಳ್ಳು ದೂರನ್ನು ಕೊಡಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಸುಮಾರು 2 ಲಕ್ಷಕ್ಕಿಂತ ಹೆಚ್ಚು ಹಣ ಖರ್ಚು ಮಾಡಿದ್ದೇನೆ ಎಂಬುದು ಮತ್ತು ಮುಂದಿನ ಚಿಕಿತ್ಸೆಗಾಗಿ ಸುಮಾರು 3 ಲಕ್ಷಕ್ಕಿಂತ ಹೆಚ್ಚು ಹಣ ಖರ್ಚಾಗಬಹುದು ಎಂಬುದು ಸುಳ್ಳು ಎಂದರೆ ಸರಿಯಲ್ಲ. ನನಗೆ 1 ಎಕರೆ 0.14 ಗುಂಟೆ ಜಮೀನು ಇದೆ. ಅದು ಮಾಡರಹಳ್ಳಿಯಲ್ಲಿ ಇದ್ದು ಅದರ ಸರ್ವೆ ನಂಬರು 51 ಆಗಿದೆ. ಅದಕ್ಕೆ ಸಂಬಂಧಿಸಿದ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆ ಜಮೀನು ಒಣ ಭೂಮಿಯಾಗಿದ್ದು ಅದರಲ್ಲಿ ಈಗ

ಏನನ್ನು ಬೆಳೆದಿಲ್ಲ. ನಾನು ತಿಂಗಳಿಗೆ ರೂ. 30 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂಬ ಬಗ್ಗೆ ಲಿಖಿತ ರೂಪದ ಸಾಕ್ಷ್ಯ ಯಾವುದು ಇಲ್ಲ. 1 ನೇ ಎದುರುದಾರರ ಟ್ರ್ಯಾಕ್ಟರ್ ನಿಂದ ನನಗೆ ಯಾವುದೇ ಅಪಘಾತ ಅಥವಾ ಗಾಯಗಳು ಆಗದೆ ಬೇರೆ ಎಲ್ಲೋ ಆಗಿರುವ ಗಾಯಗಳಿಗೆ ಪರಿಹಾರ ಪಡೆಯುವ ಸಲುವಾಗಿ 1 ನೇ ಎದುರುದಾರರ ಟ್ರ್ಯಾಕ್ಟರ್ ವಿರುದ್ಧ ಸುಳ್ಳು ಆರೋಪ ಮಾಡಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ನಮ್ಮ ಊರಿಗೂ ಚಿನಕುರಳಿಗೂ 4 ಕಿಲೋ ಮೀಟರ್ ದೂರವಿದೆ. ಚಿನಕುರುಳಿಯಲ್ಲಿ ಸಾರ್ವಜನಿಕ ಆಸ್ಪತ್ರೆ ಇದೆ ಎಂದರೆ ಸರಿ. ನಮ್ಮ ಊರಿಗೂ ಪಾಂಡವಪುರಕ್ಕೂ 9 ಕಿಲೋ ಮೀಟರ್ ಇದೆ. ಪಾಂಡವಪುರದಲ್ಲಿಯೂ ದೊಡ್ಡದಾದ ಸಾರ್ವಜನಿಕ ಆಸ್ಪತ್ರೆ ಇದೆ ಎಂದರೆ ಸರಿ. ನಮ್ಮ ಊರಿನಿಂದ ಮೈಸೂರಿಗೆ ಸುಮಾರು 30 ಕಿಲೋ ಮೀಟರ್ ಆಗುತ್ತದೆ. ನನಗೆ ಗಾಯ ಆದ ನಂತರ ನಾನು ಚಿನಕುರುಳಿ ಆಸ್ಪತ್ರೆಯಲ್ಲಾಗಲೀ ಪಾಂಡವಪುರದ ಆಸ್ಪತ್ರೆಯಲ್ಲಾಗಲೀ ತೋರಿಸಿಲ್ಲ. ಮೈಸೂರಿಗೆ ಹೋಗಬೇಕಾದರೆ ನಾನು ಚಿನಕುರುಳಿ ಪಾಂಡವಪುರ ಮಾರ್ಗವಾಗಿ ಹೋಗಬೇಕು ಎಂದರೆ ಸರಿಯಲ್ಲ. ಸಾಕ್ಷಿಯು ಕೆ ಆರ್ ಎಸ್ ಮಾರ್ಗವಾಗಿ ಹೋಗಬಹುದು ಎಂದು ಹೇಳುತ್ತಾರೆ. ಮೈಸೂರಿಗೆ ನನ್ನನ್ನು ನಮ್ಮ ಊರಿನವರ ಕಾರಿನಲ್ಲಿ ತಮ್ಮಣ್ಣ ಮತ್ತು ಮಧು ಎಂಬುವವರು ಕರೆದುಕೊಂಡು ಹೋದರು.
ಮರು ವಿಚಾರಣೆಃ ಇಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

***ಸಾ ಓ ಹೇ ಸ ಒ***

**(ಬಾಬು ಎನ್)**
***ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,***
***ಪಾಂಡವಪುರ***